**ಕರ್ನಾಟಕ ರಾಜ್ಯ ಪೊಲೀಸ್**
**ಕೇಂದ್ರ ವಲಯ, ಬೆಂಗಳೂರು.**
**ಪತ್ರಿಕಾ ಪ್ರಕಟಣೆ**

# PIT NDPS ಕಾಯ್ದೆ ಅಡಿಯಲ್ಲಿ ಮಾದಕ ವಸ್ತು ಮಾರಾಟಗಾರನಾದ ವಸೀಂ @ ವಸೀಂ ಅಕ್ರಂ ನ ಮೇಲೆ ಬಂಧನದ ಆಜ್ಞೆ.

ಸರ್ಜಾಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ವಾಸವಾಗಿರುವ ವಸೀಂ ಖಾನ್ @ ವಸೀಂ ಅಕ್ರಂ @ ವಸೀಂ ಬಿನ್ ಅಕ್ಬರ್ ಖಾನ್ @ ಚೋರ್ ಅಕ್ಬರ್, 31 ವರ್ಷ, ಅಡಿಗಾರಕಲ್ಲಹಳ್ಳಿ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕ್ ಈತನ ವಿರುದ್ದ ಶ್ರೀ ಎಂ. ಚಂದ್ರಶೇಖರ್, ಐ.ಪಿ.ಎಸ್. ಪೊಲೀಸ್ ಮಹಾನಿರೀಕ್ಷಕರು, ಕೇಂದ್ರ ವಲಯ ರವರು PIT NDPS ಕಾಯ್ದೆ 1988 ಉಪ ಕಲಂ (1) ಮತ್ತು ಕಲಂ 3 ರ ಅಡಿಯಲ್ಲಿ ಕೇಂದ್ರ ಕಾರಾಗೃಹ, ಪರಪ್ಪನ ಅಗ್ರಹಾರ ಇಲ್ಲಿ ಬಂಧನದಲ್ಲಿಡಲು ಆಜ್ಞೆ ಹೊರಡಿಸಿರುತ್ತಾರೆ. ಸದರಿ ಆದೇಶದ ಪ್ರಕಾರ ಹಾಲಿ ಆರೋಪಿ ವಸೀಂ ಅಕ್ರಂ ನನ್ನು ಬಂಧಿಸಿ ಕೇಂದ್ರ ಕಾರಾಗೃಹದಲ್ಲಿ ಬಂಧನದಲ್ಲಿರಿಸಿರುತ್ತೆ.

**ಪ್ರಕರಣದ ವಿವರ:** ಆರೋಪಿ ವಸೀಂ ಅಕ್ರಂ ಬಿನ್ ಅಕ್ಬರ್ ಖಾನ್ ಈತ ಸರ್ಜಾಪುರ ಪೊಲೀಸ್ ಠಾಣೆಯ ಅಡಿಗಾರಕಲ್ಲಹಳ್ಳಿ ಗ್ರಾಮದ ವಾಸಿಯಾಗಿದ್ದು, ಈತ ಮಾದಕ ವಸ್ತುವಾದ ಗಾಂಜಾವನ್ನು ಮಾರಾಟ ಮಾಡಿ ಅಕ್ರಮವಾಗಿ ಹಣ ಸಂಪಾದನೆ ಮಾಡುವ ವೃತ್ತಿಯಲ್ಲಿ ತೊಡಗಿಕೊಂಡಿದ್ದನು. ಈತನ ಅಕ್ರಮ ಗಾಂಜಾ ಮಾರಾಟದ ವಿರುದ್ದ ಈಗಾಗಲೇ ಸರ್ಜಾಪುರ, ಅತ್ತಿಬೆಲೆ, ಸೂರ್ಯನಗರ ಠಾಣಾ ವ್ಯಾಪ್ತಿಯಲ್ಲಿ ಮತ್ತು ಬೆಂಗಳೂರು ನಗರದಲ್ಲಿ 10 ಕ್ಕಿಂತ ಹೆಚ್ಚು ಪ್ರಕರಣಗಳು ದಾಖಲಾಗಿರುತ್ತವೆ. ಈತನಿಗೆ ಸರ್ಜಾಪುರ ಪೊಲೀಸ್ ಠಾಣೆಯಲ್ಲಿ ರೌಡಿ ಪಟ್ಟಿ ತೆರೆದಿರುತ್ತದೆ. ಈತನ ಅಕ್ರಮ ಗಾಂಜಾ ಮಾರಾಟದ ವಿರುದ್ದ ಅನೇಕ ಪ್ರಕರಣಗಳು ದಾಖಲಾಗಿದ್ದು ಬಂಧನವಾಗಿ ಜಾಮೀನಿನ ಮೇಲೆ ಹೊರ ಬಂದಿದ್ದರೂ ಸಹ ಮತ್ತೆ ತನ್ನ ರೂಢಿಗತ ಅಪರಾಧವನ್ನು ಮುಂದುವರೆಸಿದ್ದರಿಂದ 2020 ರಲ್ಲಿ ಗೂಂಡಾ ಕಾಯ್ದೆ ಅಡಿ ಬಂಧನದಲ್ಲಿರಸಲು ಆಜ್ಞೆ ಹೊರಡಿಸಿದ್ದು, ಈತ 8 ತಿಂಗಳುಗಳ ಕಾಲ ಕಾರಾಗೃಹ ಬಂಧನದಲ್ಲಿದ್ದನು.

ಕಾರಾಗೃಹದಿಂದ ಹೊರ ಬಂದ ಮೇಲೆ ಮತ್ತೆ ತನ್ನ ಹಳೆ ಚಾಳಿಯನ್ನು ಮುಂದುವರೆಸಿ ಇತ್ತೀಚೆಗೆ ಸರ್ಜಾಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅಕ್ರಮವಾಗಿ ಗಾಂಜಾ ಮಾರಾಟದಲ್ಲಿ ತೊಡಗಿದ್ದರಿಂದಾಗಿ ಈತನ ವಿರುದ್ದ ಮತ್ತೆ ಪ್ರಕರಣ ದಾಖಲಾಗಿ ದಸ್ತಗಿರಿ ಆಗಿ ಜಾಮೀನಿನ ಮೇಲೆ ಹೊರ ಬಂದಿದ್ದನು.

ಮೇಲ್ಕಂಡ ಆರೋಪಿ ವಸೀಂ ಖಾನ್‌ನ ಸಮಾಜ ವಿದ್ರೋಹಿ ಚಟುವಟಿಕೆಗಳನ್ನು ಮನಗಂಡು ಈತನು ಪದೇಪದೇ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗುವುದನ್ನು ಗಮನಿಸಿ ಈತನಿಗೆ ನೆಲದ ಕಾನೂನಿನ ಬಗ್ಗೆ ಭಯವಾಗಲಿ ಅಥವಾ ಗೌರವವಾಗಲಿ ಇಲ್ಲದೇ ಇರುವುದು ಕಂಡು ಬಂದಿದ್ದು,

ಈತನನ್ನು ಮುಕ್ತವಾಗಿ ಹೊರ ಬಿಟ್ಟಲ್ಲಿ ಮತ್ತೆ ಇಂತಹ ಕೃತ್ಯಗಳಲ್ಲಿ ಭಾಗಿಯಾಗಿ ಸಾರ್ವಜನಿಕ ಸುವ್ಯವಸ್ಥೆಗೆ ಭಂಗ ತರುವ ಸಾಧ್ಯತೆ ಇರುವುದನ್ನು ಮನಗಂಡ ಬೆಂಗಳೂರು ಜಿಲ್ಲೆಯ ಪೊಲೀಸ್ ಅಧೀಕ್ಷಕರಾದ ಶ್ರೀ ಡಾ. ಕೆ. ವಂಶಿಕೃಷ್ಣ ಐ.ಪಿ.ಎಸ್. ಅಪರ ಪೊಲೀಸ್ ಅಧೀಕ್ಷಕರಾದ ಶ್ರೀ ಕೆ. ಲಕ್ಷ್ಮೀಗಣೇಶ್, ಕೆ.ಎಸ್.ಪಿ.ಎಸ್. ರವರ ಮಾರ್ಗದರ್ಶನದಲ್ಲಿ ಆನೇಕಲ್ ಉಪ-ವಿಭಾಗದ ಪೊಲೀಸ್ ಉಪಾಧೀಕ್ಷಕರವರಾದ ಶ್ರೀ ಮಲ್ಲೇಶ್ .ಎಂ ಮುಖಾಂತರ ಸರ್ಜಾಪುರ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ರಾಘವೇಂದ್ರ ಇಮ್ರಾಪುರ್ ರವರು ಮಾನ್ಯ ಮಹಾನಿರೀಕ್ಷಕರು, ಕೇಂದ್ರ ವಲಯ ರವರಿಗೆ ವರದಿಯನ್ನು ಸಲ್ಲಿಸಿಕೊಂಡಿದ್ದರು.

(ಎಂ. ಚಂದ್ರಶೇಖರ್, ಐ.ಪಿ.ಎಸ್.)
ಪೊಲೀಸ್ ಮಹಾನಿರೀಕ್ಷಕರು,
ಕೇಂದ್ರ ವಲಯ, ಬೆಂಗಳೂರು.